# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:**- ಶ್ರೀ ಎ.ಎಸ್.ಹಲಸೋಡೆ, ಬೆಳಗಾವಿ ತಾಲ್ಲೂಕು ಪಂಚಾಯತ್‌ನ ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ಮತ್ತಿತರರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು ಪ್ರಕರಣವನ್ನು ಮಾನ್ಯ ಉಪ ಲೋಕಾಯುಕ್ತರವರಿಗೆ ವಹಿಸುವ ಕುರಿತು.

**ಓದಲಾಗಿದೆ:**- 1. ಅಪರ ನಿಬಂಧಕರು , ವಿಚಾರಣೆ-8, ಮಾನ್ಯ ಲೋಕಾಯುಕ್ತರ ಕಛೇರಿ ಇವರ ಪತ್ರ ಸಂಖ್ಯೆ:ಕಂಪ್ಲೆಂಟ್/ಉಪಲೋಕ್/ಬಿಜಿಎಂ/301/2010/ಎಆರ್‌ಇ-8, ದಿನಾಂಕ:24.08.2013

****

**ಪ್ರಸ್ತಾವನೆ:**

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ, ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕು ಪಂಚಾಯಿತಿಯ ಯಮಗರ್ಣಿ ಗ್ರಾಮ ಪಂಚಾಯತ್ ವ್ಯಾಪ್ತಿಯ ನಾಂಗನೂರು ಗ್ರಾಮದಲ್ಲಿ 2009-10 ನೇ ಸಾಲಿನಲ್ಲಿ ಮಾಡಿದ ಒಟ್ಟು-23 ಕಾಮಗಾರಿಗಳಲ್ಲಿ ಅವ್ಯವಹಾರಯಾಗಿದೆಯೆಂದು, ನಾಂಗನೂರು ಗ್ರಾಮದ ಶ್ರೀ ಭೀಮರಾವ್ ಮಾರುತಿ ಹಜಾರೆ, ಮತ್ತು ಶ್ರೀ ಸಂಭಾಜಿ ಯಶವಂತ ಪಾಟೀಲ್, ಇವರುಗಳು ಯಮಗರ್ಣಿ ಗ್ರಾಮ ಪಂಚಾಯತ್‌ಯ ಅಧ್ಯಕ್ಷರು ಮತ್ತು ಕಾರ್ಯದರ್ಶಿ, ಹಾಗೂ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ಉಪ ವಿಭಾಗ, ಜಿಲ್ಲಾ ಪಂಚಾಯತ್‌ನ ಸಹಾಯಕ ಅಭಿಯಂತರರ ವಿರುದ್ಧ ದೂರನ್ನು ನೀಡಿದ್ದು, ಈ ದೂರಿನ ಕುರಿತು, ಕರ್ನಾಟಕ ಲೋಕಾಯುಕ್ತ ಕಾಯ್ದೆ-1984ರ ಸೆಕ್ಷನ್-9 ರಡಿಯಲ್ಲಿ ವಿಚಾರಣೆಯನ್ನು ನಡೆಸಿದ್ದು, ಅನುಮೋದನೆಗೊಂಡ ಒಟ್ಟು-23 ಕಾಮಗಾರಿಗಳ ಪೈಕಿ 22 ಕಾಮಗಾರಿಗಳಲ್ಲಿ ಒಟ್ಟು-ರೂ.39,14,533/-ಗಳ ಅವ್ಯವಹಾರ/ಹಣ ದುರ್ಬಳಕೆಯಾಗಿರುವುದು/ಆರ್ಥಿಕ ನಷ್ಟ ಉಂಟಾಗಿರುವುದು ತನಿಖೆಯಿಂದ ಕಂಡುಬಂದಿದ್ದು, ಈ ಕೃತ್ಯಕ್ಕೆ ಈ ಕೆಳಕಂಡ ಅಧಿಕಾರಿಗಳು ಕಾರಣೀಭೂತರಾಗಿರುತ್ತಾರೆಂದು ತಿಳಿಸುತ್ತಾ, ಈ ರೀತಿಯ ಕೃತ್ಯವು ಸರ್ಕಾರಿ ನೌಕರರಿಗೆ ಸಲ್ಲದ ವರ್ತನೆಯಾಗಿದ್ದು, ಕರ್ನಾಟಕ ನಾಗರೀಕ ಸೇವೆಗಳು (ನಡತೆ) ನಿಯಮಾವಳಿಗಳು-1966ರ ನಿಯಮ-3(i)ರ ಉಲ್ಲಂಘನೆಯಾಗಿರುವುದರಿಂದ ಇವರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು ಹಾಗೂ ಪ್ರಕರಣವನ್ನು ಕರ್ನಾಟಕ ನಾಗರೀಕ ಸೇವೆಗಳು-(ವರ್ಗೀಕರಣ, ನಿಯಂತ್ರಣ,ಮತ್ತು ಮೇಲ್ಮನವಿ) ನಿಯಮಾವಳಿಗಳು-1957ರ ನಿಯಮ-14(ಎ)ರ ಪ್ರಕಾರ ತಮಗೆ ವಹಿಸಿಕೊಡುವಂತೆ ಮಾನ್ಯ ಉಪ ಲೋಕಾಯುಕ್ತರು-1, ಕರ್ನಾಟಕ ಇವರು ಕರ್ನಾಟಕ ಲೋಕಾಯುಕ್ತ ಕಾಯ್ದೆ-1984ರ ಸೆಕ್ಷನ್-12(3)ರ ಪ್ರಕಾರ ಶಿಫಾರಸ್ಸುಮಾಡಿರುವುದಾಗಿ ತಿಳಿಸುತ್ತಾ, ಅಂತೆಯೇ ಮುಂದಿನ ಕ್ರಮವನ್ನು ಕೈಗೊಳ್ಳುವಂತೆ ಮೇಲೆ ಓದಲಾದ ಪತ್ರದಲ್ಲಿ ಅಪರ ನಿಬಂಧಕರು, ವಿಚಾರಣೆ-8, ಮಾನ್ಯ ಲೋಕಾಯುಕ್ತರ ಕಛೇರಿ, ಕರ್ನಾಟಕ ಇವರು ಕೋರಿರುತ್ತಾರೆ.

1. ಶ್ರೀ ಎ.ಎಸ್.ಹಲಸೋಡೆ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಚಿಕ್ಕೋಡಿ, (ಪ್ರಸ್ತುತ ಸಹಾಯಕ ಕಾರ್ಯದರ್ಶಿ, ಜಿಲ್ಲಾ ಪಂಚಾಯತ್ ಬೆಳಗಾವಿ ಜಿಲ್ಲೆ)
2. ಶ್ರೀ ಎ.ಜಿ.ಕುಂಬಾರ್,ಹಿಂದಿನ ಸಹಾಯಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್, ಉಪ ವಿಭಾಗ, ಚಿಕ್ಕೋಡಿ, ಬೆಳಗಾವಿ ಜಿಲ್ಲೆ.(ಪ್ರಸ್ತುತ ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ-4, ಉಪ ವಿಭಾಗ, ಚಿಕ್ಕೋಡಿ ಬ್ರಾಂಚ್, ಕೆನಾಲ್, ಕಬ್ಬೂರ್, ಚಿಕ್ಕೋಡಿ ತಾಲ್ಲೂಕು.
3. ಶ್ರೀ ಎಸ್.ಆರ್.ಪಾಟೀಲ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್, ಉಪ ವಿಭಾಗ, ಚಿಕ್ಕೋಡಿ, ಸದರಿಯವರು ದಿನಾಂಕ:30.06.2011ರಂದು ಮರಣ ಹೊಂದಿರುತ್ತಾರೆ.
4. ಶ್ರೀ ಪಿ.ಹೆಚ್.ಪಾಟೀಲ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಯಮಗರ್ಣಿ ಗ್ರಾಮ ಪಂಚಾಯತ್, ಚಿಕ್ಕೋಡಿ ತಾಲ್ಲೂಕು.
5. ಶ್ರೀಮತಿ ಮೀನಾಕ್ಷಿ ಎಸ್ ಮೋರೆ, ಅಧ್ಯಕ್ಷರು, ಗ್ರಾಮ ಪಂಚಾಯತ್, ಯಮಗರ್ಣಿ.

ಕ್ರಮ ಸಂಖ್ಯೆ:3ರಲ್ಲಿರುವ ಅಧಿಕಾರಿಯಾದ ಶ್ರೀ ಎಸ್.ಆರ್.ಪಾಟೀಲ್, ಇವರು ದಿನಾಂಕ:30.06.2011 ರಂದು ಮೃತ ಪಟ್ಟಿರುತ್ತಾರೆಂದು, ಮಾನ್ಯ ಲೋಕಾಯುಕ್ತರು ತಮ್ಮ ವರದಿಯಲ್ಲಿ ತಿಳಿಸುತ್ತಾ, ಇನ್ನುಳಿದ 4 ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಶಿಫಾರಸ್ಸುಮಾಡಿರುತ್ತಾರೆ.

ಮೇಲೆ ನಮೂದಿಸಿರುವ 5 ಅಧಿಕಾರಿಗಳ ಪೈಕಿ, ಕ್ರ.ಸಂ 5ರಲ್ಲಿರುವ ಶ್ರೀಮತಿ ಮೀನಾಕ್ಷಿ ಎಸ್ ಮೋರೆ, ಅಧ್ಯಕ್ಷರು, ಗ್ರಾಮ ಪಂಚಾಯತ್, ಯಮಗರ್ಣಿ ಇವರು ಅಧಿಕಾರೇತರರಾಗಿದ್ದು, ಇವರ ವಿರುದ್ಧ ಕರ್ನಾಟಕ ನಾಗರೀಕ ಸೇವೆಗಳು-(ವರ್ಗೀಕರಣ, ನಿಯಂತ್ರಣ,ಮತ್ತು ಮೇಲ್ಮನವಿ) ನಿಯಮಾವಳಿಗಳು-1957ರ ನಿಯಮ-14(ಎ)ರಡಿಯಲ್ಲಿ ಇಲಾಖಾ ವಿಚಾರಣೆ/ಶಿಸ್ತುಕ್ರಮ ಜರುಗಿಸಲು, ಅವಕಾಶವಿರುವುದಿಲ್ಲ. ಈ ಬಗ್ಗೆ ಪ್ರತ್ಯೇಕವಾಗಿ ಪರಿಶೀಲಿಸಲು ಕ್ರಮವಹಿಸಲಾಗುತ್ತಿದೆ.

ಮಾನ್ಯ ಉಪ ಲೋಕಾಯುಕ್ತರ ಶಿಫಾರಸ್ಸು ಹಾಗೂ ದಾಖಲೆಗಳನ್ನು ಪರಿಶಿಲಿಸಲಾಗಿ ಆರೋಪಿತರ ವಿರುದ್ಧದ ಆರೋಪಗಳು ಮೇಲ್ನೋಟಕ್ಕೆ ಸಾಬೀತಾಗಿರುವುದು ಕಂಡುಬಂದಿರುವುದರಿಂದ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲು ಪ್ರಕರಣವನ್ನು ಉಪ ಲೋಕಾಯುಕ್ತರವರಿಗೆ ವಹಿಸಲು ಸರ್ಕಾರವು ತೀರ್ಮಾನಿಸಿದೆ. ಆದುದರಿಂದ ಈ ಕೆಳಕಂಡ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 322 ಪಬವ 2013 ಬೆಂಗಳೂರು ದಿನಾಂಕ:06-11-2013</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ ಈ ಕೆಳಕಂಡ ಅಧಿಕಾರಿ/ನೌಕರರ ವಿರುದ್ಧ ಕರ್ನಾಟಕ ನಾಗರೀಕ ಸೇವೆಗಳು-(ವರ್ಗೀಕರಣ, ನಿಯಂತ್ರಣ,ಮತ್ತು ಮೇಲ್ಮನವಿ) ನಿಯಮಾವಳಿಗಳು-1957ರ ನಿಯಮ-11ರಡಿ ಇಲಾಖಾ ವಿಚಾರಣೆ ನಡೆಸಲು, ಪ್ರಕರಣವನ್ನು ಕರ್ನಾಟಕ ನಾಗರೀಕ ಸೇವೆಗಳು-(ವರ್ಗೀಕರಣ, ನಿಯಂತ್ರಣ,ಮತ್ತು ಮೇಲ್ಮನವಿ) ನಿಯಮಾವಳಿಗಳು-1957ರ ನಿಯಮ-14(ಎ)ರ ಪ್ರಕಾರ ಮಾನ್ಯ ಉಪ ಲೋಕಾಯುಕ್ತ-1 ರವರಿಗೆ ವಹಿಸಿದೆ.

1. ಶ್ರೀ ಎ.ಎಸ್.ಹಲಸೋಡೆ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಚಿಕ್ಕೋಡಿ, (ಪ್ರಸ್ತುತ ಸಹಾಯಕ ಕಾರ್ಯದರ್ಶಿ, ಜಿಲ್ಲಾ ಪಂಚಾಯತ್ ಬೆಳಗಾವಿ ಜಿಲ್ಲೆ)
2. ಶ್ರೀ ಎ.ಜಿ.ಕುಂಬಾರ್,ಹಿಂದಿನ ಸಹಾಯಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್, ಉಪ ವಿಭಾಗ, ಚಿಕ್ಕೋಡಿ, ಬೆಳಗಾವಿ ಜಿಲ್ಲೆ.(ಪ್ರಸ್ತುತ ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ-4, ಉಪ ವಿಭಾಗ, ಚಿಕ್ಕೋಡಿ ಬ್ರಾಂಚ್, ಕೆನಾಲ್, ಕಬ್ಬೂರ್, ಚಿಕ್ಕೋಡಿ ತಾಲ್ಲೂಕು.
3. ಶ್ರೀ ಪಿ.ಹೆಚ್.ಪಾಟೀಲ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಯಮಗರ್ಣಿ ಗ್ರಾಮ ಪಂಚಾಯತ್, ಚಿಕ್ಕೋಡಿ ತಾಲ್ಲೂಕು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ

(ಚಂದ್ರಶೇಖರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

6/11

<u>ಇವರಿಗೆ,</u>

1) ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2) ಮಾನ್ಯ ಉಪ ಲೋಕಾಯುಕ್ತರು-1, ಕರ್ನಾಟಕ ಲೋಕಾಯುಕ್ತ, ಬೆಂಗಳೂರು
3) ಅಪರ ನಿಬಂಧಕರು, ವಿಚಾರಣೆ-8, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ವಿಕಾಸ ಸೌಧ, ಬೆಂಗಳೂರು.
5) ಜಿಲ್ಲಾಧಿಕಾರಿ, ಬೆಳಗಾವಿ ಜಿಲ್ಲೆ.
6) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೆಳಗಾವಿ.
7) ಅಪರ ನಿಬಂಧಕರು, ವಿಚಾರಣೆ-8,ಕರ್ನಾಟಕ ಲೋಕಾಯುಕ್ತ, ಬೆಂಗಳೂರು-01.
8) ಸರ್ಕಾರದ ಅಧೀನ ಕಾರ್ಯದರ್ಶಿ,ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ (ಗ್ರಾಮ್ ಪಂಚಾಯತ್ & ಜಿಲ್ಲಾ ಪಂಚಾಯತ್)
9) ಸರ್ಕಾರದ ಅಧೀನ ಕಾರ್ಯದರ್ಶಿ,ಸೇವೆಗಳು-ಎ ಶಾಖೆ,ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

<u>ಪ್ರತಿ ಮಾಹಿತಿಗಾಗಿ:</u>

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು
2) ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ (ಪಂ.ರಾಜ್)/ ಅಪರ ಕಾರ್ಯದರ್ಶಿ (ಆಡಳಿತ) ರವರ ಆಪ್ತ ಶಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
3) ಮೇಲ್ವಿಚಾರಕರು, ಗಣಕ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
4) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.